## "ಗ್ರಾಮಭಾರತಿ ವಿದ್ಯಾಸಂಸ್ಥೆ"

## 2022–2023ನೇ ಸಾಲಿನ ವಾರ್ಷಿಕ ವರದಿ.

ಎಲ್ಲರಿಗೂ ನಮಸ್ಕಾರ ಗ್ರಾಮಭಾರತಿ ವಿದ್ಯಾಸಂಸ್ಥೆಯ 2022–23ನೇ ಸಾಲಿನ ವಾರ್ಷಿಕ ವರದಿಯನ್ನು ತಮ್ಮೆಲರ ಮುಂದೆ ಮಂಡಿಸಲು ಸಂತಸವಾಗುತ್ತಿದೆ.

1974–75ರಲ್ಲಿ ನಾಲ್ಕು ದಶಕಗಳ ಹಿಂದೆ ಗ್ರಾಮಭಾರತಿ ವಿದ್ಯಾಸಂಸ್ಥೆಯನ್ನು ತಮ್ಮ ತನು, ಮನ, ಧನಗಳನ್ನು ಧಾರೆಯೆರೆದು ಪೂಜ್ಯ ಶ್ರಿ ಎಸ್.ಎಂ.ಲಿಂಗಪ್ಪನವರು ಸ್ಥಾಪಿಸಿದರು. ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಕನಸುಗಳನ್ನು ಬಿತ್ತಿ ಅವುಗಳನ್ನು ನನಸು ಮಾಡಲು ಅವರೊಂದಿಗೆ ಒಂದಾಗಿ ಪ್ರಯತ್ನಿಸುವ ವಿದ್ಯಾಸಂಸ್ಥೆ ವಿದ್ಯಾರ್ಥಿಗಳಿಗೆ ಸ್ವಾವಲಂಬನೆಯ ಬೀಜಮಂತ್ರವನ್ನು ಉಪದೇಶಿಸುವ ಮಾದರಿ ಸಂಸ್ಥೆಯಾಗಿದೆ.

1990ರಲ್ಲಿ ಎಸ್.ಎಂ.ಲಿಂಗಪ್ಪನವರು ಸ್ವರ್ಗಸ್ತರಾದ ನಂತರ ಶ್ರೀಯುತ ಎಸ್.ಸಿ. ಚಿಕ್ಕಣ್ಣಗೌಡರು ಸಂಸ್ಥೆಯ ಸಾರಥ್ಯ ವಹಿಸಿಕೊಂಡರು. ವಿದ್ಯಾಸಂಸ್ಥೆಯು ಬೃಹದಾಕಾರವಾಗಿ ಬೆಳೆಯಲು ಶ್ರೀಯುತರ ದಕ್ಷತೆ, ದೂರದರ್ಶಿತ್ವ, ಪರಿಶ್ರಮ ಅವರ ಹೆಸರನ್ನು ಚಿರಸ್ಥಾಯಿಗೊಳಿಸಿದೆ.

2007ರಲ್ಲಿ ಶ್ರೀಯುತ ಎಸ್.ಸಿ. ಚಿಕ್ಕಣ್ಣಗೌಡರು ಅಸ್ತಂಗತರಾದ ನಂತರ ಅವರ ಪಥದಲ್ಲಿ ಅವರು ಕಂಡ ಹಲವು ಕನಸುಗಳನ್ನು ನನಸುಗೊಳಿಸುವಲ್ಲಿ ಸಂಸ್ಥೆಗೆ ದಾರಿದೀಪವಾಗಿ ಬಂದವರು ಸದಾ ಕ್ರಿಯಾಶೀಲರು, ಹೃದಯವಂತಿಕೆ, ಸೃಜನಶೀಲತೆಯ ಪ್ರತೀಕವಾದ ಕಾಯಕ ಜೀವಿ ಶ್ರೀ ಎಸ್.ಸಿ.ಕಿರಣ್‌ಕುಮಾರ್ ರವರು ಹಾಗೂ ಅನುಭವದ ಪ್ರತೀಕವಾದ ಆಡಳಿತ ಮಂಡಳಿಯ ಗೌರವ ಕಾರ್ಯದರ್ಶಿಗಳಾದ ಮಾತೃಶ್ರೀ ಕೆ.ಎಂ.ಪುಟ್ಟಲಕ್ಷ್ಮಮ್ಮನವರು ಹಾಗೂ ನಿರ್ದೇಶಕರುಗಳಾದ ಶ್ರೀ ಬಿ.ಎಸ್.ಚಂದ್ರಶೇಖರ್‌ರವರು, ಶ್ರೀ ಎಂ.ಜಿ. ಪರಮೇಶ್‌ರವರು, ಶ್ರೀ ಎಸ್.ಎಸ್.ರುದ್ರೇಶ್‌ರವರು, ಶ್ರೀ ಎಸ್.ಟಿ.ಶ್ರೀನಿವಾಸ್‌ರವರು, ಶ್ರೀಮತಿ ಕೌಸಲ್ಯರವರು, ಶ್ರೀ ಎ.ಎನ್.ಬಾಲಚಂದ್ರರವರು ಹಾಗೂ ಶ್ರೀ ಎಲ್.ವಿ.ನಾಗೇಶ್‌ರವರು, ಇವರೆಲ್ಲರ ಶ್ರಮ–ಮಾರ್ಗದರ್ಶನದಲ್ಲಿ ಸಂಸ್ಥೆ ಪ್ರಗತಿ ಪಥದಲ್ಲಿ ಮುನ್ನೆಡೆಯುತ್ತಿದೆ.

ವಿದ್ಯಾದಾನ, ಅಭಯದಾನ, ಅನ್ನಧಾನದಿಂದ ಖ್ಯಾತಿಗಳಿಸಿರುವ ಗ್ರಾಮಭಾರತಿ ವಿದ್ಯಾಸಂಸ್ಥೆ ಸರ್ವತೋಮುಖ ಅಭಿವೃದ್ದಿಗಾಗಿ ಹಲವಾರು ವಿಶಿಷ್ಟ ಯೋಜನೆಗಳನ್ನು ಹಮ್ಮಿಕೊಂಡು ಮುನ್ನಡೆಯುತ್ತಿದೆ ಸಂಸ್ಥೆಯ ಉನ್ನತಿಯ ಹಿನ್ನೆಲೆಯಲ್ಲಿ ತಾವು ಕಂಡ ಹಲವು ಕನಸುಗಳನ್ನು ಸಕಾರಗೊಳಿಸುವಲ್ಲಿ ಮತ್ತು ಅದನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವಲ್ಲಿ ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಮಾರ್ಗದರ್ಶಿ ದಾರಿದೀಪವಾಗಿದೆ. ಶಿಕ್ಷಕವೃಂದದ ಕಾಯಕ ಪ್ರಜ್ಞೆಯಿಂದ ಶೈಕ್ಷಣಿಕವಾಗಿ ಪ್ರಗತಿ ಹಾದಿಯಲ್ಲಿ ಮುನ್ನಡೆಯುತ್ತಿರುವ ಸಂಸ್ಥೆ ಗುಣಮಟ್ಟದ ಶಿಕ್ಷಣಕ್ಕೆ ವಿಶೇಷ ಆದ್ಯತೆ ನೀಡಿದೆ.

1. ಕರೋನ ಮಹಾಮಾರಿಯಿಂದ ಸಮಾಜದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಾಕಷ್ಟು ಬೀಳುಗಳೊಂದಿಗೆ ತನ್ನೆಲ್ಲಾ ಕಷ್ಟಗಳನ್ನು ಸಂಸ್ಥೆಯು ಧೈರ್ಯದಿಂದ ಸಮರ್ಥವಾಗಿ ನಿಭಾಯಿಸಿದೆ ಎಂದು ತಿಳಿಸಲು ಹರ್ಷಿಸುತ್ತೇವೆ. ಕರೋನ ಶುರುವಾದಾಗಿನಿಂದ ಸಂಸ್ಥೆಯ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ

ಇಳಿಕೆಯಾಗಿದ್ದು ಸದರಿ ವರ್ಷ ಸ್ವಲ್ಪ ಚೇತರಿಕೆ ಕಂಡು ಪೂರ್ವ ಪ್ರಾಥಮಿಕ ಶಾಲೆಯಲ್ಲಿ 21–22ನೇಯ ಸಾಲಿನಲ್ಲಿದ್ದ 72 ಮಕ್ಕಳಿಂದ 22–23ನೇಯ ಸಾಲಿನಲ್ಲಿ 120 ಮಕ್ಕಳಿಗೆ ಏರಿಕೆಯಾಗಿತ್ತು. ಅಲ್ಲದೆ ಶಿಕ್ಷಕರ ಸಂಖ್ಯೆಯನ್ನು 3 ರಿಂದ 5ಕ್ಕೆ ಏರಿಸಲಾಯಿತು.

2. ಗ್ರಾಮಭಾರತಿ ಪೂರ್ವ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 21–22ನೇಯ ಸಾಲಿನಲ್ಲಿದ್ದ 255 ಮಕ್ಕಳಿಂದ 22–23ನೇಯ ಸಾಲಿನಲ್ಲಿ 315 ಮಕ್ಕಳಿಗೆ ಏರಿಕೆಯಾಗಿ ಶಿಕ್ಷಣ ಪಡೆಯುತ್ತಿದ್ದಾರೆ. ಅಲ್ಲದೆ ಶಿಕ್ಷಕರ ಸಂಖ್ಯೆಯನ್ನು 8 ರಿಂದ 13 ಕ್ಕೆ ಏರಿಸಲಾಯಿತು.

3. ಗ್ರಾಮಭಾರತಿ ಹಿರಿಯ ಪ್ರಾಥಮಿಕ ಆಂಗ್ಲಮಾಧ್ಯಮದ ವಿಭಾಗದಲ್ಲಿ 6 ಶಿಕ್ಷಕರು, 1 ಬೋಧಕೇತರ ವರ್ಗ ಕರ್ತವ್ಯ ನಿರ್ವಹಿಸುತ್ತಿದ್ದು 154 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಕ್ರೀಡಾಕ್ಷೇತ್ರದಲ್ಲಿ ತಾಲ್ಲೂಕು ಮಟ್ಟದ ಬಾಲಕಿಯರ ಥ್ರೋಬಾಲ್ ವಿಭಾಗದಲ್ಲಿ ತಾಲ್ಲೂಕಿಗೆ ಪ್ರಥಮ ಸ್ಥಾನವನ್ನು ಪಡೆದು ಜಿಲ್ಲಾ ಮಟ್ಟದಲ್ಲಿ ತಾಲ್ಲೂಕನ್ನು ಪ್ರತಿನಿಧಿಸಿರುತ್ತಾರೆ. ಎಚ್.ಡಿ.ಕಿರಣ್ ಕುಮಾರ್ ಎಂಬ ವಿದ್ಯಾರ್ಥಿಯು 100 ಮೀ ಓಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಪ್ರಥಮ ಸ್ಥಾನವನ್ನು ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿ ವಿದ್ಯಾಸಂಸ್ಥೆಗೆ ಕೀರ್ತಿ ತಂದಿರುತ್ತಾರೆ.

4. ಗ್ರಾಮಭಾರತಿ ಪ್ರೌಢಶಾಲೆಯು ಮುಖ್ಯ ಶಿಕ್ಷಕರನ್ನು ಒಳಗೊಂಡಂತೆ 10 ಸಹ ಶಿಕ್ಷಕರನ್ನು 02 ಬೋಧಕೇತರ ವೃಂದವನ್ನು ಹೊಂದಿದೆ. 182 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದು 2023 ಮಾರ್ಚ್ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 98% ಫಲಿತಾಂಶ ಪಡೆದಿದೆ. ಹೆಚ್.ಎಸ್.ಮೋಹನ 556 ಅಂಕ ಪಡೆದು ಉನ್ನತ ಶ್ರೇಣಿ ಪಡೆದಿರುತ್ತಾರೆ. ಲಾವಣ್ಯ ಕೆ.ಡಿ. 551, ಕಿಶನ್ ಎಸ್.ಗೌಡ 530 ಅಂಕಗಳನ್ನು ಪಡೆದು ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದಿರುತ್ತಾರೆ. ಪ್ರಥಮ ಶ್ರೇಣಿಯಲ್ಲಿ 39 ವಿದ್ಯಾರ್ಥಿಗಳು 11 ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ.

ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ಚಕ್ರ ಎಸೆತ, ಗುಂಡು ಎಸೆತ, ಉದ್ದ ಜಿಗಿತ, ಎತ್ತರ ಜಿಗಿತ ಮತ್ತು ತ್ರಿವಿಧ ಜಿಗಿತದಲ್ಲಿ ಪ್ರಥಮ ಸ್ಥಾನವನ್ನು ಪಡೆದು ಜಿಲ್ಲಾ ಹಂತಕ್ಕೆ ಆಯ್ಕೆಯಾಗಿವಿದ್ಯಾಸಂಸ್ಥೆಗೆ ಕೀರ್ತಿ ತಂದಿರುತ್ತಾರೆ.

5. ಎಸ್.ಎಂ. ಲಿಂಗಪ್ಪ ಪದವಿ ಪೂರ್ವ ಕಾಲೇಜು ಕಲಾ ಮತ್ತು ವಾಣಿಜ್ಯ ವಿಭಾಗವನ್ನು ಹೊಂದಿದ್ದು 7 ಉಪನ್ಯಾಸಕರು 01 ಬೋಧಕೇತರ ವೃಂದವನ್ನು ಹೊಂದಿದೆ. 150 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದು, 2023 ಮಾರ್ಚ್‌ನಲ್ಲಿ ನಡೆದ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 91.36% ಫಲಿತಾಂಶಪಡೆದಿದೆ. ಕಲಾ ವಿಭಾಗದಲ್ಲಿ ಚೇತನ್ ವಿ.ಎಸ್. 522 ಅಂಕ ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಕುಮಾರಿ ಸಿಂಚನ ಎ.ಎಚ್. 535 ಅಂಕ ಪಡೆದು ಪ್ರಥಮ ಸ್ಥಾನ ಪಡೆದಿದ್ದಾರೆ

ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಬಾಲಕಿಯರ ವಿಭಾಗದಲ್ಲಿ ಟೆನಿಕಾಯಿಟ್‌ನಲ್ಲಿ ಪ್ರಥಮ ಸ್ಥಾನವನ್ನು, ವಾಲಿಬಾಲ್ ಮತ್ತು ಬಾಲ್ ಬ್ಯಾಡ್ಮಿಂಟನ್‌ನಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ. ಟೆನಿಕಾಯಿಟ್‌ನಲ್ಲಿ ಬಾಲಕರು ದ್ವಿತೀಯ ಸ್ಥಾನ ಪಡೆದಿದ್ದಾರೆ.

6. ಎಸ್.ಎಂ. ಲಿಂಗಪ್ಪ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲರನ್ನು ಒಳಗೊಂಡಂತೆ 8 ಉಪನ್ಯಾಸಕರು, 02 ಬೋಧಕೇತರ ವೃಂದವನ್ನು ಹೊಂದಿದೆ 79 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಗುಣಮಟ್ಟದ ಶಿಕ್ಷಣ ನೀಡಬೇಕೆಂಬ ಮಹತ್ವಾಕಾಂಕ್ಷೆ ಹೊತ್ತು ಶಿಕ್ಷಕರನ್ನು ತರಬೇತಿಗೊಳಿಸಲು ಸದಾ ಉತ್ಸುಕವಾಗಿದೆ. ಸರ್ಕಾರದ ನಿಯಮದಂತೆ ಬಿ.ಇಡಿ ಪದವಿ 2 ವರ್ಷಗಳ ಪದವಿಯಾಗಿ ಪರಿವರ್ತನೆಯಾಗಿದ್ದು ಮೊದಲ ಮತ್ತು ಎರಡನೇ ಸೆಮಿಸ್ಟರ್ ಪರೀಕ್ಷೆಯಲ್ಲಿ 100% ಫಲಿತಾಂಶ ಪಡೆದಿದೆ.

7. ವಿದ್ಯಾಸಂಸ್ಥೆಯ ಎಲ್ಲಾ ವಿಭಾಗಗಳ ವಿದ್ಯಾರ್ಥಿ ಸಂಘ ಹಾಗೂ ಶಾಲಾ ಸಂಸತ್ ರಚಿಸಲಾಯಿತು.

8. ಗ್ರಾಮಭಾರತಿ ವಿದ್ಯಾಸಂಸ್ಥೆಯ ಪ್ರಾಂಗಣದಲ್ಲಿ 2022 ಆಗಸ್ಟ್ 15ರ ಸ್ವಾತಂತ್ರ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ಗ್ರಾಮಭಾರತಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಯುತ ಎಸ್.ಸಿ.ಕಿರಣ್‌ಕುಮಾರ್‌ರವರು ಧ್ವಜರೋಹಣ ನೆರವೇರಿಸಿದರು. 2022 ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವ ಹಾಗೂ 2023 ಜನವರಿ 26 ರಂದು ಗಣರಾಜ್ಯೋತ್ಸವವನ್ನು ಸಡಗರದಿಂದ ಆಚರಿಸಲಾಯಿತು. ಶ್ರೀ ಎಸ್.ಸಿ. ಕಿರಣ್‌ಕುಮಾರ್‌ರವರು ರಾಷ್ಟ್ರೀಯ ಹಾಗೂ ನಾಡಹಬ್ಬಗಳ ವೇದಿಕೆಯಲ್ಲಿ ಅಧ್ಯಕ್ಷ ಸ್ಥಾನ ಅಲಂಕರಿಸಿ ವಿದ್ಯಾರ್ಥಿಗಳಲ್ಲಿ ರಾಷ್ಟ್ರಪ್ರೇಮ ಹಾಗೂ ನಾಡಿನ ಪ್ರೇಮದ ಜೊತೆಗೆ ಪರಿಸರ ಪ್ರಜ್ಞೆ ಶಿಸ್ತು ಅತ್ಯಂತ ಅವಶ್ಯಕವೆಂದು ಸಂದೇಶ ನೀಡಿದರು. ಶ್ರೀಯುತ ಯತೀಶ್, ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ ಅವರು ಪ್ರಧಾನ ಉಪನ್ಯಾಸಕರಾಗಿ ಉಪಸ್ಥಿತರಿದ್ದು ಗಣತಂತ್ರ ದಿನದ ಮಹತ್ವದ ಬಗ್ಗೆ ಉಪನ್ಯಾಸವನ್ನು ನೀಡಿದರು. 2022 ಅಕ್ಟೋಬರ್ 2 ರಂದು ಗಾಂಧಿಜಿ ಮತ್ತು ಮಾಜಿ ಪ್ರದಾನಮಂತ್ರಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಗೌರವಾನ್ವಿತ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಸಂಸ್ಥೆಯ ಸಮಸ್ತ ನೌಕರ ವೃಂದ ಸಾಮೂಹಿಕ ಪ್ರಾರ್ಥನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಅರ್ಥಪೂರ್ಣವಾಗಿತ್ತು. ಶಾಸ್ತ್ರಿಯವರ ವ್ಯಕ್ತಿತ್ವ–ಸಾಧನೆ ಕುರಿತು ಅಧ್ಯಕ್ಷರು ಅರ್ಥಪೂರ್ಣವಾಗಿ ಮಾತನಾಡಿದರು.

9. ಗ್ರಾಮಭಾರತಿ ವಿದ್ಯಾಸಂಸ್ಥೆಯಲ್ಲಿ ವಾಲ್ಮೀಕಿ ಜಯಂತಿ, ಕನಕದಾಸ ಜಯಂತಿ, ಅಂಬೇಡ್ಕರ್ ಜಯಂತಿ ಹಾಗೂ ಬಸವ ಜಯಂತಿಯನ್ನು ಶ್ರದ್ಧೆ ಭಕ್ತಿಯಿಂದ ಆಚರಿಸಲಾಯಿತು. ವಿದ್ಯಾರ್ಥಿಗಳು ಮಹಾತ್ಮರ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸತ್ಪ್ರಜೆಗಳಾಗಿ ಬದುಕಿ ಎಂದು ಅಧ್ಯಕ್ಷರು ಕರೆನೀಡಿದರು. ಪ್ರತಿವರ್ಷದಂತೆ ಗಣೇಶ ಉತ್ಸವವನ್ನು ಶ್ರದ್ಧೆ ಭಕ್ತಿಗಳಿಂದ ಆಚರಿಸಲಾಯಿತು. ನವೆಂಬರ್

14ರಂದು ಮಕ್ಕಳ ದಿನಾಚರಣೆಯನ್ನು ಆಚರಿಸಲಾಯಿತು. ಶಿಕ್ಷಕವೃಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟು ಮಕ್ಕಳನ್ನು ಮನರಂಜಿಸಿದರು.

10. ಪ್ರತಿವರ್ಷದಂತೆ ಡಿಸೆಂಬರ್ 3 ರಂದು ಶ್ರೀ ಎಸ್.ಸಿ. ಚಿಕ್ಕಣ್ಣಗೌಡರ ಸ್ಮರಣಾರ್ಥ ಪುರಸಭೆ ವ್ಯಾಪ್ತಿಯ ಪ್ರೌಢಶಾಲಾ ಹಂತದ ವಾಲಿಬಾಲ್ ಪಂದ್ಯಾವಳಿ ಮತ್ತು ತಾಲ್ಲೂಕು ಮಟ್ಟದ ರಸಪ್ರಶ್ನೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಡಿಸೆಂಬರ್ 18 ರಂದು ಸಂಸ್ಥೆಯ ಸಂಸ್ಥಾಪಕರಾದ ಶ್ರೀಯುತ ಎಸ್.ಎಂ.ಲಿಂಗಪ್ಪನವರ 104ನೇ ಜನ್ಮದಿನೋತ್ಸವವನ್ನು ಆಚರಿಸಲಾಯಿತು.

11. ಶಿವರಾತ್ರಿ ಹಬ್ಬದಂದು ಸಂಸ್ಥೆಯ ಒಳಾಂಗಣ ಕ್ರೀಡಾಂಗಣದಲ್ಲಿ ಆಟವಾಡುವ ಸದಸ್ಯರುಗಳಿಗಾಗಿ ಹೊನಲು ಬೆಳಕಿನ ಷಟಲ್ ಬ್ಯಾಂಡ್ಮಿಟನ್ ಪಂದ್ಯಾವಳಿಯನ್ನು ಅಯೋಜಿಸಲಾಗಿತ್ತು ಮತ್ತು ಎಲ್ಲಾ ಸದಸ್ಯರುಗಳು ಉತ್ಸಾಹದಿಂದ ಭಾಗವಹಿಸಿ ಪಂದ್ಯಾವಳಿಯನ್ನು ಯಶಸ್ವಿಗೊಳಿಸಿದರು.

12. ಗ್ರಾಮಭಾರತಿ ವಿದ್ಯಾಂಸ್ಥೆಯ ಆಡಳಿತ ಮಂಡಳಿ ವಿದ್ಯಾಸಂಸ್ಥೆಯ ಆಧುನೀಕರಣ ಮತ್ತು ಉನ್ನತೀಕರಣದಲ್ಲಿ ಸದಾ ಕ್ರಿಯಾಶೀಲವಾಗಿದ್ದು ಆಡಳಿತ ಮಂಡಳಿ 8 ಬಾರಿ ಸಭೆ ಸೇರಿ ಕೈಗೊಂಡ ನಿರ್ಣಯಗಳು ಈ ಕೆಳಕಂಡತಿವೆ.

ಗ್ರಾಮಭಾರತಿ ವಿದ್ಯಾಸಂಸ್ಥೆಯ ಹಿರಿಯ ನಿರ್ದೇಶಕರುಗಳಾದ ಶ್ರೀಯುತ ಎ.ಎಂ.ನಂಜುಂಡೇಗೌಡ, ಶ್ರೀಯುತ ಹುಚ್ಚೇಗೌಡ ಮತ್ತು ಶ್ರೀಯುತ ರಾಮಲಿಂಗೇಗೌಡರು ತಮ್ಮ ಸ್ವಂತ ಇಚ್ಛೆಯಿಂದ ವಯಸ್ಸಿನ ಕಾರಣ ನೀಡಿ ವಿಶ್ರಾಂತಿಯನ್ನು ಬಯಸಿದ್ದರಿಂದ ಅವರುಗಳನ್ನು ನಿರ್ದೇಶಕ ಸ್ಥಾನದಿಂದ ಬಿಡುಗಡೆ ನೀಡಿ ಅವರುಗಳ ಸ್ಥಾನಕ್ಕೆ ಅವರ ಸಲಹೆಯಂತೆ ಹೊಸಬರನ್ನು ಆಯ್ಕೆ ಮಾಡಲಾಯಿತು. ಇದಾದ ನಂತರ ಸಂಸ್ಥೆಯ ಆಡಳಿತ ಮಂಡಳಿಯು ಸಭೆ ಸೇರಿ ಚರ್ಚಿಸಲಾಗಿ ಉಳಿದ ಇಬ್ಬರು ಸದಸ್ಯರ ಆಯ್ಕೆ ಸಂದರ್ಭದಲ್ಲಿ 75 ವರ್ಷ ತುಂಬಿದ ಹಿರಿಯ ಸದಸ್ಯರಾದ ಶ್ರೀಯುತ ಶಾಂತಹೃದಯರವರ ಸ್ಥಾನಕ್ಕೆ ಅವರ ಅಣ್ಣನ ಮಗ ಶ್ರೀಯುತ ಎಸ್.ಎಸ್.ರುದ್ರೇಶ್ ಅವರನ್ನು ಆಯ್ಕೆ ಮಾಡಲಾಯಿತು ಉಳಿದಂತೆ ಮತ್ತೊಂದು ಸ್ಥಾನಕ್ಕೆ ಎಂ.ಜಿ. ಪರಮೇಶ್ ಅವರನ್ನು ಆಯ್ಕೆ ಮಾಡಲಾಯಿತು.

ಸದರಿ ವರ್ಷ ಸಂಸ್ಥೆಯ ಪೂರ್ವ ಪ್ರಾಥಮಿಕ, ಹಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಮತ್ತು ಪ್ರೌಢಶಾಲೆಯ ಎಲ್ಲಾ ನೌಕರರುಗಳಿಗೆ ತಲಾ 3,000/- ರೂಪಾಯಿಗಳಷ್ಟು ವೇತನವನ್ನು ಹೆಚ್ಚಿಸಲು ತೀರ್ಮಾನ ಕೈಗೊಳ್ಳಲಾಯಿತು. ಪದವಿ ಪೂರ್ವ ಮತ್ತು ಬಿ.ಇಡಿ. ಕಾಲೇಜಿನ ನೌಕರರುಗಳಿಗೆ ತಲಾ 2,000/- ರೂಪಾಯಿಗಳನ್ನು ಹೆಚ್ಚಿಸಲು ತೀರ್ಮಾನಲಾಯಿತು. ಇದರಿಂದಾಗಿ ಸದರಿ ಸಾಲಿನಲ್ಲಿ ನೌಕರರುಗಳ ಸಂಬಂಳ ವಾರ್ಷಿಕವಾಗಿ ಒಟ್ಟು ರೂ 14,26,601/- ಹೆಚ್ಚಳವಾಗಿದೆ.

ಪ್ರೌಢಶಾಲಾ ವಿಭಾಗದ ಶ್ರೀಮತಿ ಮಂಜುಳ ಅವರಿಗೆ 20 ವರ್ಷಗಳ ಕಾಲಮಿತಿ ಬಡ್ತಿ ಹಾಗೂ ಶ್ರೀಯುತ ಎಸ್.ಬಿ.ಜಗದೀಶ್, ಶ್ರೀಯುತ ಹೆಚ್.ಎನ್.ವಜ್ರಪ್ರಸಾದ್ ಮತ್ತು ಶ್ರೀಯುತ ಸಿ.ಆರ್.ಹರೀಶ್ ಅವರುಗಳಿಗೆ 10 ವರ್ಷಗಳ ಕಾಲಮಿತಿ ಬಡ್ತಿಯನ್ನು ನೀಡಲು ತೀರ್ಮಾನಿಸಲಾಯಿತು.

ಸಂಸ್ಥೆಯ ವಿದ್ಯಾರ್ಥಿಗಳಿಗಾಗಿ ಶುದ್ಧ ನೀರಿನ ಘಟಕವನ್ನು ರೂ 2,00,000/– (ಎರಡು ಲಕ್ಷ) ವೆಚ್ಚದಲ್ಲಿ ನಿರ್ಮಾಣ ಮಾಡಲಾಯಿತು.

ಪೂರ್ವ ಪ್ರಾಥಮಿಕ ಶಾಲಾ ಮಕ್ಕಳಿಗಾಗಿ ಆಟದ ಮೈದಾನಕ್ಕೆ ಹರಿಸು ನೆಲಹಾಸು ಮತ್ತು ಮೇಲ್ಚಾವಣಿಯನ್ನು 4,00,000/– (ನಾಲ್ಕು ಲಕ್ಷ) ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣ ಮಾಡಲಾಯಿತು.

ಪ್ರಗತಿಯಲ್ಲಿದ್ದ ಸಾಹುಕಾರ್ ಎಸ್.ಸಿ. ಚಿಕ್ಕಣ್ಣಗೌಡ ಒಳಾಂಗಣ ಕ್ರೀಡಾಂಗಣದ ಕಾಮಗಾರಿಯನ್ನು 39,26,931/– (ಮುವತ್ತೊಂಬತ್ತು ಲಕ್ಷದ ಇಪ್ಪತ್ತಾರು ಸಾವಿರದ ಒಂಬೈನೂರ ಮುವತ್ತೊಂದು) ರೂಪಾಯಿಗಳ ವೆಚ್ಚದಲ್ಲಿ ಪೂರ್ಣಗೊಳಿಸಿ, ಚಿಕ್ಕಣ್ಣಗೌಡರ 76ನೇ ಜನ್ಮದಿನವಾದ ಡಿಸೆಂಬರ್ 5, 2022 ರಂದು ಅವರಗಳ ಕುಟುಂಬ ಸದಸ್ಯರುಗಳಿಂದ ಲೋಕಾರ್ಪಣೆಗೊಳಿಸಲಾಯಿತು. ಸಮಾರಂಭದಲ್ಲಿದ್ದ ಅವರ ಕುಟುಂಬ ಸದಸ್ಯರುಗಳು ಕ್ರೀಡಾಂಗಣವನ್ನು ವೀಕ್ಷಿಸಿದ ನಂತರ ಅದರ ಅಗಾಧತೆ ಮತ್ತು ಅಂತಾರಾಷ್ಟ್ರೀಯ ಗುಣಮಟ್ಟವನ್ನು ಕಾಯ್ದುಕೊಂಡಿರುವುದಕ್ಕೆ ಸಂತಸ ವ್ಯಕ್ತ ಪಡಿಸಿದರು ಹಾಗೂ ಈ ರೀತಿಯ ಅಭಿವೃದ್ಧಿಯನ್ನು ಮಾಡುತ್ತಿರುವ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯವರನ್ನು ಶೀಳನೆರೆ ಸಾಹುಕಾರ್ ಎಸ್.ಕೆ.ಚಿಕ್ಕಣ್ಣಗೌಡರ ಕುಟುಂಬ ವರ್ಗದ ಪರವಾಗಿ ಅಭಿನಂದಿಸಿದರು.

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದುಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ, ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಶಿಕ್ಷಣ ಸಂಸ್ಕೃತಿ ಸಂಚಯದ ಜ್ಞಾನದೀವಿಗೆ ಜ್ಞಾನವನ್ನು ಕೇವಲ ಪಂಡಿತ ಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರ ಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಯನ್ನು ಶೋಧನೆಗೆ ಹಚ್ಚುತ್ತಾ ಆತ್ಮವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಗುರಿಯ ಕಡೆ ಹೆಜ್ಜೆ ಹಾಕಬೇಕು ಎಂಬ ಆಶಯದೊಂದಿಗೆ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಾ ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳನ್ನು ಸಮೃದಗೊಳಿಸುತ್ತಾ ಪ್ರಗತಿ ಪಥದಲ್ಲಿ ಸಾಗುತ್ತಿರುವ ವಿದ್ಯಾಸಂಸ್ಥೆಯ ಶ್ರೇಯಸ್ಸಿಗೆ ತಮ್ಮೆಲ್ಲರ ಆರ್ಶಿವಾದ ಹಾಗೂ ಸಹಕಾರ ಬಯಸುತ್ತಾ ತಮ್ಮ ಹೃನ್ಮನಗಳಿಗೆ ಸಮರ್ಪಿಸುತಿದ್ದೇವೆ.

**ವಂದನೆಗಳೊಂದಿಗೆ.**